**ಕರ್ನಾಟಕ ಸರ್ಕಾರ**

ಸಂಖ್ಯೆಃ ಪಪೂಶಿಇ/ಆಡಳಿತ-(ಎ)/ಉ.ವರ್ಗ-01/2017-18

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: /08/2018.

**ಜ್ಞಾಪನ**

ವಿಷಯ: 2017-18ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಕೋರಿಕೆ ವರ್ಗಾವಣೆ ಆದೇಶವನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:1.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 12 ಇಟಿಆರ್ 2017 ದಿನಾಂಕ:29.11.2017.

2. ಈ ಕಚೇರಿಯ ಸಮ ಪತ್ರ ಸಂಖ್ಯೆ ಸುತ್ತೋಲೆ ದಿನಾಂಕ:24/01/2018.
3. ಈ ಕಛೇರಿ ಜ್ಞಾಪನ ಸಂಖ್ಯೆ:ಪಪೂಶಿಇ/ಆಡಳಿತಎ/ಉ.ವರ್ಗ.01/2017-18 ದಿನಾಂಕ:24.07.2018.
4. ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಕರ್ನಾಟಕ ರವರ ಪತ್ರ ಸಂಖ್ಯೆ:ರಾಚುಆ.2:ನ.ಸ್ಥ.ಸಂ.(ನೀ.ಸಂ)2018 ದಿ:4.8.2018.

******

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2017ರ ಅಧಿನಿಯಮ ಮತ್ತು ನಿಯಮಗಳನ್ವಯ 2017-18ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ ಮೂಲಕ ನಡೆಸಲಾಗಿದೆ. ಸದರಿ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಉಪನ್ಯಾಸಕರಿಗೆ ಮುಂದಿನ ಆದೇಶದ ವರೆಗೆ ವರ್ಗಾಯಿಸಿ ಆದೇಶಿಸಿದೆ. ಉಪನ್ಯಾಸಕರು ಸ್ಥಳ ಆಯ್ಕೆ ಮಾಡಿಕೊಂಡು ವರ್ಗಾವಣೆಗೊಂಡಿರುವ ವಿವರಗಳನ್ನು ಅನುಬಂಧ-1ರ ರೀತ್ಯಾ ನಮೂದಿಸಿದೆ. ವರ್ಗಾವಣೆಗೊಂಡ ಉಪನ್ಯಾಸಕರಿಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆದೇಶಿಸಿದೆ.

ಉಲ್ಲೇಖ 4ರ ಪತ್ರದಲ್ಲಿ ವರ್ಗಾವಣೆ ಆದೇಶ ಜಾರಿಗೊಳಿಸಲು ಅನುಮತಿಯನ್ನು ಪಡೆಯಲಾಗಿದೆ.

**ಷರತ್ತುಗಳು:**

1. ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪಡೆದ ಉಪನ್ಯಾಸಕರ ಸೇವಾ ವಿವರವನ್ನು ಕ.ನಾ.ಸೇ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2017ರ ನಿಯಮ 15ರಂತೆ ಪರಿಶೀಲಿಸಿದ ತರುವಾಯ ವರ್ಗಾವಣೆ ಆದೇಶ ಪ್ರಕಟಗೊಂಡ 7 ದಿನಗಳ (ದಿ:13.08.2018) ಒಳಗಾಗಿ ಕಡ್ಡಾಯವಾಗಿ ಕರ್ತವ್ಯದಿಂದ ಬಿಡುಗಡೆ ಮಾಡತಕ್ಕದ್ದು ಮತ್ತು ಹಾಜರುಪಡಿಸಿಕೊಳ್ಳತಕ್ಕದ್ದು. ಇದರ ಬಗ್ಗೆ ನಿರ್ದೇಶನಾಲಯಕ್ಕೆ ವರದಿ ಮಾಡುವುದು.

2. ಉಪನ್ಯಾಸಕರ ವರ್ಗಾವಣೆಯು ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಆಗಿರುವುದರಿಂದ ಸ್ಥಳ ಮಾರ್ಪಡಿಸಲು ಅವಕಾಶ ಇರುವುದಿಲ್ಲ ಮತ್ತು ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.
3. ವರ್ಗಾವಣೆಗೊಂಡ ಸ್ಥಳದಲ್ಲಿ ಹುದ್ದೆ ಖಾಲಿ ಇದೆಯೇ ಎಂದು ಖಾತರಿ ಪಡಿಸಿಕೊಂಡ ನಂತರವೇ ಉಪನ್ಯಾಸಕರನ್ನು ಬಿಡುಗಡೆ ಮಾಡತಕ್ಕದ್ದು. ಹುದ್ದೆ ಖಾಲಿ ಇಲ್ಲದ ಪಕ್ಷದಲ್ಲಿ ನಿರ್ದೇಶನಾಲಯಕ್ಕೆ ವರದಿಮಾಡುವುದು.
4. ಉಪನ್ಯಾಸಕರ ವರ್ಗಾವಣೆಯು ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಆಗಿರುವುದರಿಂದ ಪ್ರಯಾಣ ಭತ್ಯೆ ಹಾಗೂ ಸೇರಿಕೆ ಕಾಲಕ್ಕೆ ಅರ್ಹರಾಗಿರುವುದಿಲ್ಲ.
5. ಉಲ್ಲೇಖ-04ರ ಪತ್ರದಲ್ಲಿನ ಷರತ್ತಿನನ್ವಯ ಸ್ಥಳೀಯ ಸಂಸ್ಥೆಗಳ ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಉಪನ್ಯಾಸಕರುಗಳನ್ನು ಚುನಾವಣಾ ಕಾರ್ಯಗಳು ಮುಗಿದ ನಂತರ ಬಿಡುಗಡೆಗೊಳಿಸಲು ತಿಳಿಸಿದೆ.
6. ಕೋರಿಕೆ ವರ್ಗಾವಣೆಯಲ್ಲಿ ಕಡ್ಡಾಯ ವರ್ಗಾವಣೆ ಪಟ್ಟಿಯಲ್ಲಿರುವವರ Deemed Vacancy ಗೆ ಸ್ಥಳ ಆಯ್ಕೆ ಮಾಡಿಕೊಂಡಿರುವುದರಿಂದ ಸದರಿ ಸ್ಥಳಗಳಲ್ಲಿನ ಉಪನ್ಯಾಸಕರುಗಳನ್ನು ತಕ್ಷಣ ಬಿಡುಗಡೆಗೊಳಿಸಲು ಸೂಚಿಸಿದೆ.

4/8/18

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,

ಪ್ರತಿಯನ್ನು:-

1. ಮಹಾಲೇಖಪಾಲಕರು, ಕರ್ನಾಟಕ ಸರ್ಕಾರ, ಬೆಂಗಳೂರು.
2. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ – ಮುಂದಿನ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ.
4. ಸಂಬಂಧಿಸಿದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ- ಅಂತರ್ಜಾಲದ ಮುಖಾಂತರ ಅಗತ್ಯ ಕ್ರಮಕ್ಕಾಗಿ.
5. ಸಂಬಂಧಿಸಿದ ಉಪನ್ಯಾಸಕರಿಗೆ- ಅಂತರ್ಜಾಲದ ಮೂಲಕ.
6. ಕಛೇರಿ ಪ್ರತಿ.